ಗಮನಿಸಿ ಹೇಳಬೇಕು ಎಂದು ತಾಕೀತು ಮಾಡಲಾಗಿತ್ತು. ಸಮೂಹವೊಂದರಲ್ಲಿ ಏಕೀಭಾವವೆನ್ನುವುದು ಯಾವ ರೀತಿ ರೂಪುಗೊಳ್ಳುತ್ತದೆ. ಅದರ ಸತ್ಯಾಸತ್ಯಗಳೇನು, ಅದರಿಂದ ಕಂಪನಿಯ ವ್ಯವಹಾರದ ಮೇಲಾಗುವ ಪರಿಣಾಮ ಹಾಗೂ ಅಂಥವುಗಳನ್ನು ಸಮರ್ಥವಾಗಿ ಎದುರಿಸುವುದು ಹೇಗೆ ಎಂಬುದನ್ನು ತಿಳಿಹೇಳುವುದು ಆ ಟ್ರೇನಿಂಗಿನ ಉದ್ದೇಶ.

ಕೆಲ ಸಮಯದ ಚರ್ಚೆಯ ನಂತರ ಎರಡೂ ಗುಂಪು ತಾವು ಕಂಡುಕೊಂಡ ವಿಷಯವನ್ನು ಅರುಹಿದವು. ಅವರು ಹಾಗೆ, ಇವರು ಹೀಗೆ ಎನ್ನುವ ವಿಚಾರ ವಿನಿಮಯದಲ್ಲಿ, 'ಅಂತರ್ಮುಖಿ ಜನರಲ್ಲಿ ಇತರರನ್ನು ಕೊಲೆಗೈಯುವ ಸ್ವಭಾವ ದಟ್ಟವಾಗಿರುತ್ತದೆ' ಎನ್ನುವ ಅಭಿಪ್ರಾಯವೂ ಸೇರಿತ್ತು. ಇದಕ್ಕೆ ಅಂತರ್ಮುಖಿ ಗುಂಪು ಆಕ್ಷೇಪ ವ್ಯಕ್ತಪಡಿಸಿದರೆ, ಸಂಗತಿಯನ್ನು ಮಂಡಿಸಿದ ಗುಂಪು ತಮ್ಮ ನಿಲುವನ್ನು ಒಮ್ಮತದಿಂದ ಪ್ರತಿಪಾದಿಸಿತ್ತು. ಸಣ್ಣ ವಿರಾಮದ ನಂತರ, ಆ ಪಂಗಡದ ಒಬ್ಬೊಬ್ಬರೇ ಸದಸ್ಯರನ್ನು ಪ್ರತ್ಯೇಕವಾಗಿ ಕರೆದು ಸಮಾಲೋಚಿಸಲಾಗಿ, ತಾವು ಮಂಡಿಸಿದ ವಾದಕ್ಕೆ ಯಾವುದೇ ಪುಷ್ಟಿಯಿಲ್ಲವೆಂದು ಒಪ್ಪಿಕೊಂಡರು. 'ಹಾಗಾದರೆ ನೀವ್ಯಾಕೆ ಕೆಲ ಹೊತ್ತಿನ ಮುಂಚೆ ವ್ಯತಿರಿಕ್ತವಾದುದನ್ನು ಸಮರ್ಥಿಸಿಕೊಂಡಿರಿ?' ಎಂಬ ಪ್ರಶ್ನೆಗೆ ಅವರಲ್ಲಿ ಸಮಂಜಸ ಉತ್ತರವಿರಲಿಲ್ಲ.

ನಾನು ಅನೇಕ ಬಾರಿ ಯೋಚಿಸಿದ್ದಿದೆ. ಯಾವುದೋ ದೇಶದ, ಕಂಡರಿಯದ ಭಾಷೆಯ, ಮ್ಯೂಸಿಕ್ ಬ್ಯಾಂಡ್ ಒಂದು ಇಲ್ಲಿಯ ಯುವಜನರನ್ನು ಅದೇಕೆ ಹುಚ್ಚಿನಂತೆ ಕಾಡುತ್ತದೆ? (ಉದಾಹರಣೆಗೆ: ಕೊರಿಯನ್ ಬಿಟಿಎಸ್ ಹಾಡುಗಳ ಇತ್ತೀಚಿನ ಜನಪ್ರಿಯತೆ). ಯಾವುದೋ ಒಂದು ಗುಲ್ಲಿಗೆ ಷೇರು ಮಾರುಕಟ್ಟೆಯೇಕೆ ಒಮ್ಮೆಲೇ ಗಗನಕ್ಕೇರುತ್ತದೆ ಅಥವಾ ಕುಸಿಯುತ್ತದೆ? ವಾಟ್ಸ್ಆ್ಯಪಿನಲ್ಲಿ ಬರುವ ಸುಳ್ಳು ಸುದ್ದಿಗಳೇಕೆ ವೈರಸ್ಸಿನಂತೆ ಹಬ್ಬುತ್ತವೆ? ಇನ್ನೂ ಮುಂದುವರಿದು – ನಾಯಕನ ಮಾತಿಗೆ ಮರುಳಾಗಿ ದೇಶವೊಂದರಲ್ಲಿ ಸಾವಿರಕ್ಕೂ ಅಧಿಕ ಜನ ಸಾಮೂಹಿಕ ಆತ್ಮಹತ್ಯೆ ಯಾಕೆ ಮಾಡಿಕೊಳ್ಳುತ್ತಾರೆ? ಮತ್ತೊಂದೆಡೆ, ತನ್ನ ನೆಲಕ್ಕೆ ಯಾರಿಂದಲೋ ಅಪಾಯವಿದೆಯೆಂದು ದೇಶಕ್ಕೆ ದೇಶವೇ ಹೇಗೆ ಸನ್ನಿಗೊಳಗಾಗುತ್ತದೆ? ಇಂಥ ಪ್ರಶ್ನೆಗಳಿಗೆ ಉತ್ತರ, ಇತರರನ್ನು ಅನುಕರಿಸುವ ಮನುಷ್ಯನ ಮೂಲ ಸ್ವಭಾವದಲ್ಲಿಯೇ ಇದೆ ಅನ್ನಿಸುತ್ತದೆ. ಬೇರೆಯವರು ಏನು ಮಾಡುತ್ತಿದ್ದಾರೆ ಎನ್ನುವುದರ ಮೇಲೆ ತಾನೇನು ಮಾಡಬೇಕೆಂಬುದನ್ನು ನಿರ್ಧರಿಸುತ್ತಾನೆ ಮನುಷ್ಯ. ಅದೂ, ಯಾವುದು ಸರಿ ಯಾವುದು ತಪ್ಪು ಎನ್ನುವ ನಿಖರತೆ ನಮ್ಮಲ್ಲಿಲ್ಲದಾಗ ನಮ್ಮ ಸುತ್ತಲಿನ ಸಮುದಾಯದ ಅಭಿಪ್ರಾಯದ ಮೇಲೆ ನಾವು ಹೆಚ್ಚಿನ ವಿಶ್ವಾಸವಿಡುತ್ತೇವೆ. ಯಾವುದೋ ಒಂದು ವಿಚಾರವನ್ನು ಅತಿ ಹೆಚ್ಚು ಜನರು ಸರಿ ಎಂದು ನಂಬಿದ್ದರೆ ಅದು ಸರಿಯಾಗೇ ಇರುತ್ತದೆ ಎಂಬುದು ನಮ್ಮ ವಿಚಾರ. ನಮ್ಮ ಮೆದುಳು ಕೂಡಾ ಆದಷ್ಟು ಕಡಿಮೆ ಶ್ರಮವನ್ನೇ ಬಯಸುತ್ತದೆ. ಯೋಚಿಸಿ ತಲೆ ಕೆಡಿಸಿಕೊಳ್ಳುವುದಕ್ಕಿಂತ ಸಿದ್ಧಪಡಿಸಿಟ್ಟ ಸಂಗತಿಗಳನ್ನೇ ಒಪ್ಪಿಕೊಳ್ಳುವ ಸುಲಭ ವಿಧಾನಕ್ಕೆ ಮಣಿಯುತ್ತದೆ. ಅಮೆರಿಕದ ಪತ್ರಕರ್ತ ವಾಲ್ಟರ್ ಲಿಪ್‌ಮನ್ ಹೇಳಿದಂತೆ – **'We all think alike, no one thinks very much'.**



ಕಲೆ: ಬಾದಲ್

★★★

ಹಿಟ್ಲರನ ಸರಕಾರದಲ್ಲಿ ಮಂತ್ರಿಯಾಗಿದ್ದ ಜೋಸೆಫ್ ಗೋಬೆಲ್ಸ್‌ನ ಭಾಷಣದ ತುಣುಕೊಂದು ಯೂಟ್ಯೂಬಿನಲ್ಲಿ ಲಭ್ಯವಿದೆ. ಲಕ್ಷಾಂತರ ಜನ ಸೇರಿರುವ ಸಭೆಯಲ್ಲಿ ಆತ, 'ನೀವು ಹಿಂದೆಂದೂ ಕಾಣದಂತಹ, ಕಲ್ಪಿಸಲೂ ಸಾಧ್ಯವಿಲ್ಲದಂತಹ ತೀವ್ರವಾದ ಯುದ್ಧಕ್ಕೆ ಸಿದ್ಧರಿದ್ದೀರಾ?' ಎಂದು